ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿ.ಟಿ.ಇ/ರಾಸೇಯೋ/ಚಟುವಟಿಕೆ/02/2019-20

ನಿರ್ದೇಶಕರವರ ಕಛೇರಿ
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ: 03.09.2021

**ಸುತ್ತೋಲೆ**

**ವಿಷಯ:** ಗಣೇಶ ಚೌತಿಯಂದು ಅರಿಶಿಣ ಗಣಪತಿಯನ್ನು ನಿರ್ಮಿಸುವ ಜಾಗೃತಿ ಅಂದೋಲನದ ಬಗ್ಗೆ.
**ಉಲ್ಲೇಖ:** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ ಪತ್ರ ಸಂಖ್ಯೆ:
ಕರಾಮಾನಿಮಂ/ಹಿಪಅ(ಜಾ)/2021-22/ಗಣೇಶ ಹಬ್ಬ/ 2539 ದಿನಾಂಕ: 31-08-2021

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಹತ್ತುಲಕ್ಷ ಅರಿಶಿಣ ಗಣೇಶಗಳನ್ನು ನಿರ್ಮಿಸುವ ಮಹತ್ತರ ಗುರಿ ಹೊಂದಿದೆ. ವಿಶ್ವದಾಖಲೆಯ ಈ ಪ್ರಯತ್ನದಲ್ಲಿ ಎಲ್ಲರ ಸಹಭಾಗಿತ್ವವನ್ನು ಕೋರಿ ಮನೆಯಲ್ಲಿ ಅರಿಶಿಣ ಗಣೇಶನೊಂದಿಗೆ ಒಂದು ಭಾವಚಿತ್ರವನ್ನು ಮಂಡಳಿಯ ಅಂತರ್‌ಜಾಲತಾಣ turmericganesha.com ನಲ್ಲಿ upload ಮಾಡಿದವರಿಗೆ ಬಹುಮಾನ ಗೆಲ್ಲುವ ಅವಕಾಶವನ್ನು ಕಲ್ಪಿಸಿದೆ.

**ಗಣೇಶ ಚೌತಿಯಂದು ಅರಿಶಿಣ ಪುಟ್ಟ ಗಣಪತಿ ಪೂಜಿಸೋಣ ಕೋವಿಡ್ ನಿವಾರಕ ಪರಿಸರ ಸ್ನೇಹಿ ಹಬ್ಬ ಆಚರಿಸೋಣ** ಎಂಬ ಧ್ಯೇಯವಾಕ್ಯದ **ಜಾಗೃತಿ ಅಂದೋಲನಕ್ಕೆ** ಆಯುಕ್ತಾಲಯದ ವ್ಯಾಪ್ತಿಯ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ವಿಶ್ವದಾಖಲೆಯ ಈ ಪ್ರಯತ್ನಕ್ಕೆ ಕೊಡುಗೆ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರವನ್ನು ಲಗತ್ತಿಸಿದೆ.

ನಿರ್ದೇಶಕರು

ಇವರಿಗೆ:-ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ,

ಪ್ರತಿ: 1) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ #49, ಪರಿಸರ ಭವನ, ಬೆಂಗಳೂರು
2) ರಾಜ್ಯ ಎನ್‌ಎಸ್‌ಎಸ್ ಅಧಿಕಾರಿಗಳು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಗಳೂರು-ಮಾಹಿತಿಗಾಗಿ
3) ಕಛೇರಿ ಕಡತಕ್ಕೆ

**Karnataka State Pollution Control Board**

NSS

2959387/21

563

01 SEP 2021

**Srinivasulu,** I.F.S.
**Member Secretary, KSPCB**
**(Department of Forest, Ecology & Environment)**

**D.O. No.** ಕರಾಮಾನಿಮಂ/ಹಿಪಅ(ಜಾ)/೨೦೨೧-೨೨/ಗಣೇಶ ಹಬ್ಬ/ 2539 Date:೩೧.೮.೨೦೨೧

31 AUG 2021

ಮಾನ್ಯರೇ,

ತಮಗೆ ತಿಳಿದಿರುವಂತೆ ಈ ಬಾರಿಯ ಗೌರಿ ಗಣೇಶ ಹಬ್ಬದ ಸನಿಹದ ದಿನಗಳಲ್ಲಿ ನಾವಿದ್ದೇವೆ. ಪಿಒಪಿ ಹಾಗೂ ವಿಷಯುಕ್ತ ರಾಸಾಯನಿಕ ಬಣ್ಣಗಳನ್ನು ಹೊಂದಿದ ಲಕ್ಷಾಂತರ ಗಣಪತಿ ವಿಗ್ರಹಗಳು ನೀರಿನಲ್ಲಿ ವಿಸರ್ಜನೆಗೊಂಡು ನದಿ ತೊರೆಗಳು, ಕೆರೆ ಕಟ್ಟೆಗಳ ನೀರು ಮಾಲಿನ್ಯವಾಗುವುದರಿಂದ ಪಿಒಪಿ ಹಾಗೂ ಬಣ್ಣದ ಗಣಪತಿ ಮೂರ್ತಿಗಳನ್ನು ಬಳಸದಿರಲು ಮಂಡಳಿಯ ಅಧಿಸೂಚನೆ ಸಂಖ್ಯೆ: ಮಾನಿಮಂ/೧೮/ಜಾರಿಕೋಶ/ಹಿಪಅ/೧೧೦/೨೦೧೬-೧೭/೨೨೧೧, ದಿನಾಂಕ: ೨೦.೦೭.೨೦೧೬ ರಲ್ಲಿ ನಿರ್ಭಂದಿಸಿದೆ.

ಇಡೀ ವಿಶ್ವವನ್ನು ಕೋವಿಡ್-೧೯ ಸೋಂಕು ಆವರಿಸಿದ್ದು, ಇಂತಹ ಸಂದಿಗ್ಧ ಸಂದರ್ಭದಲ್ಲಿ ಮನೆ ಮನೆಗಳಲ್ಲಿ ರೋಗನಿರೋಧಕ ಶಕ್ತಿಯುಳ್ಳ ಅರಿಶಿಣ ಮಿಶ್ರಿತವಾದ ಗೋಧಿ ಹಿಟ್ಟು ಅಥವಾ ರಾಗಿಹಿಟ್ಟಿನಿಂದ ಮಾಡಿದ ಪುಟ್ಟ ಗಣೇಶ ವಿಗ್ರಹಗಳನ್ನು ಪೂಜೆ ಮಾಡಿದಲ್ಲಿ ಕುಟುಂಬದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎಂಬ ಹೊಸತನವನ್ನು ನಾವು ಜನರಲ್ಲಿ ಮೂಡಿಸಬೇಕಾಗಿದೆ. ರೋಗನಿರೋಧಕ ಪರಿಕರ ಬಳಸಿ ಮನೆಯಲ್ಲಿಯೇ ಗಣೇಶನ ವಿಗ್ರಹ ಮಾಡಿ ಮನೆಯಲ್ಲೇ ವಿಸರ್ಜಿಸಿದರೆ ಸಾಮಾಜಿಕ ಅಂತರ ಕಾಪಾಡಿಕೊಂಡಂತಾಗುತ್ತದೆ. ವಿಸರ್ಜಿತ ನೀರಿನಿಂದ ಮನೆಯನ್ನು ಶುಚಿ ಮಾಡಿಕೊಂಡರೆ ಕ್ರಿಮಿನಾಶಕವಾಗಿಯೂ ಬಳಕೆಗೆ ಬರುತ್ತದೆ.

ಈ ಬಾರಿ ಗೌರಿ ಗಣೇಶ ಹಬ್ಬವನ್ನು ಕೋವಿಡ್ ನಿರೋಧಕ ಅರಿಶಿಣ ಬಳಸಿದ ಪುಟ್ಟ ಪ್ರತಿಮೆಗಳನ್ನು ಇರಿಸಿ ಆಚರಿಸುವ ಮೂಲಕ ಪ್ರಕೃತಿಗೆ ನೀಡಬೇಕಾದ ಅನಿವಾರ್ಯತೆಯಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅರಿಶಿನ ಗಣಪತಿ ಬಳಸುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಆಂದೋಲನವನ್ನು ಕಳೆದ ವರ್ಷದಿಂದ ಸಾಲಿನಿಂದ ಆರಂಭಿಸಿದ್ದು, ಸಾರ್ವಜನಿಕರಿಂದ ಪ್ರಶಂಸೆಗೆ ಒಳಗಾಗಿದೆ.

ಈ ಬಾರಿ ವಿಶೇಷವಾಗಿ ಹತ್ತು ಲಕ್ಷ ಅರಿಶಿಣ ಗಣೇಶಗಳನ್ನು ನಿರ್ಮಿಸುವ ಗುರಿಯೊಂದಿಗೆ ವಿಶ್ವ ದಾಖಲೆ ನಿರ್ಮಿಸುವ ಪ್ರಯತ್ನಕ್ಕೆ ತಾವೆಲ್ಲರೂ ಕೈ ಜೋಡಿಸಬೇಕಾಗಿ ಮಂಡಳಿಯು ವಿನಂತಿಸುತ್ತಿದೆ. ನೀವು ಮನೆಯಲ್ಲಿ ತಯಾರಿಸಿದ ಅರಶಿಣ ಗಣೇಶನೊಂದಿಗೆ ನಿಮ್ಮ ಭಾವಚಿತ್ರವನ್ನು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ turmericganesha.com website ನಲ್ಲಿ upload ಮಾಡಿ. ಆಕರ್ಷಕ ಬಹುಮಾನ ಗೆಲ್ಲುವ ಅವಕಾಶಗಳನ್ನು ಪಡೆಯಿರಿ.

**ಗಣೇಶ ಚೌತಿಯಂದು ಅರಿಶಿಣ ಪುಟ್ಟ ಗಣಪತಿ ಪೂಜಿಸೋಣ ಕೋವಿಡ್ ನಿವಾರಕ ಪರಿಸರಸ್ನೇಹಿ ಹಬ್ಬ ಆಚರಿಸೋಣ** ಎಂಬ ಧ್ಯೇಯವಾಕ್ಯದೊಂದಿಗೆ, ಪ್ರತೀ ಬಾರಿ NSS ಸ್ವಯಂ ಸೇವಕರು ಮತ್ತು ಶಿಕ್ಷಕರು ಯಾವುದೇ ಜಾಗೃತಿ ಆಂದೋಲನಗಳಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಅದರಂತೆ ಈ ಅರಿಶಿಣ ಗಣಪತಿ ಬಳಸುವ ಆಂದೋಲನವನ್ನು ರಾಜ್ಯದ ಎಲ್ಲಾ ಭಾಗದ ಶಿಕ್ಷಕರು ಹಾಗೂ NSS ಸ್ವಯಂ ಸೇವಕರಿಗೆ ತಲುಪಿಸುವ ಉದ್ದೇಶದಿಂದ ಒಂದು ವೆಬಿನಾರ್ (ವಿಷಯ: **ಅರಿಶಿಣ ಗಣೇಶ ಪರಿಸರ ಸ್ನೇಹಿ ಗಣೇಶ)** ಅನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಮ್ಮಿಕೊಳ್ಳಬೇಕೆಂದು ಚಿಂತಿಸಿದೆ. ಈ ವೆಬಿನಾರನ್ನು ನಡೆಸಲು ಹಾಗೂ ಇದರಲ್ಲಿ ಎಲ್ಲಾ ಕಾಲೇಜು ಶಿಕ್ಷಕರು ಹಾಗೂ NSS ಸ್ವಯಂ ಸೇವಕರು ಭಾಗಿಯಾಗಲು ಆದೇಶಿಸಬೇಕೆಂದು **ಸೂಚಿಸಬೇಕಾಗಿ ವಿನಂತಿಸುತ್ತೇವೆ.**

ತಮ್ಮ ನಂಬುಗೆಯ,

562
02/9/21

ಇವರಿಗೆ:
ಆಯುಕ್ತರು,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

*"Our motto is to minimize waste generation by judicial use of natural resources"*

Address: #49, Parisara Bhavan,
Church Street, Bangalore - 560 001
+91 08 2558 8270
+91 08 2558 9115
ms@kspcb.gov.in
www.kspcb.gov.in